

## ಮನೆ ಮನೆಗೆ ಬರುವ ಪಾಂಡವರು

ಸಾಮಾನ್ಯವಾಗಿ ಹಿಂದೂ ಧರ್ಮದ ಮಹತ್ವದ ಹಬ್ಬಗಳಲ್ಲಿ ದೀಪಾವಳಿ ಹಬ್ಬವೂ ಒಂದು. ಎಲ್ಲ ಜಾತಿಯ, ಎಲ್ಲ ವರ್ಗದ ಜನರೂ ಅತ್ಯಂತ ಶ್ರದ್ಧೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಉತ್ತರ ಕರ್ನಾಟಕದಲ್ಲಿ ಈ ಹಬ್ಬದ ಆಚರಣೆ ತುಸು ವಿಭಿನ್ನವಾಗಿಯೇ ಕಾಣುತ್ತದೆ. ಪೌರಾಣಿಕ ಹಿನ್ನೆಲೆಯಲ್ಲಿ ಕೆಲವು ಆಚರಣೆಗಳು ಅಷ್ಟೇ ಅರ್ಥಪೂರ್ಣವಾಗಿಯೂ ಜರುಗುತ್ತವೆ.

ಮಹಾಭಾರತದ ಪ್ರಕಾರ, ಕೌರವರು ಹಾಗೂ ಪಾಂಡವರ ಮಧ್ಯೆ ನಡೆದ ಕದನದಲ್ಲಿ ಪಾಂಡವರು ಪರಾಭವಗೊಳ್ಳುತ್ತಾರೆ. ಇದರಿಂದಾಗಿ ಹನ್ನೆರಡು ವರ್ಷಗಳ ಕಾಲ ಪಾಂಡವರು ಬಹಿಷ್ಕಾರಕ್ಕೊಳಪಡುತ್ತಾರೆ. ಯಾವುದೇ ರಾಜಾಧಿಕಾರವಿಲ್ಲದೇ ಜನಸಾಮಾನ್ಯರಂತೆ ಅಜ್ಞಾತವಾಗಿ ಜೀವನ ಸಾಗಿಸಿ ಕಾರ್ತಿಕ ಅಮಾವಾಸ್ಯೆಯಂದು ಪಾಂಡವರಾಗಿ ನಾಡಿಗೆ ಹಿಂದಿರುಗುತ್ತಾರೆ ಎಂಬುದು ಮಹಾಭಾರತದ ಉಲ್ಲೇಖ. ಇದೇ ದೀಪಾವಳಿ ಆಚರಣೆಗೆ ಕಾರಣ ಎಂದು ಹೇಳಲಾಗುತ್ತದೆ. ಇದರ ಸಂಕೇತವಾಗಿ ಮನೆಮನೆಯ ಮಹಿಳೆಯರು ಗೋವಿನ ಸಗಣೆಯಿಂದ ಪಾಂಡವರ ಮೂರ್ತಿಗಳನ್ನು ಮಾಡಿ ಉತ್ತರಾಣಿ ಕಡ್ಡಿ, ಅಣ್ಣಿ ಹೂವು, ಹೊನ್ನಂಬರಿ ಹೂವುಗಳಿಂದ ಅಲಂಕೃತಗೊಳಿಸಿ ಹೊಸ್ತಿಲಿಗಿಟ್ಟು ಪೂಜೆ ಮಾಡಿ ಸುಣ್ಣದಿಂದ ಹೆಜ್ಜೆ ಗುರುತುಗಳನ್ನು ಮಾಡಿ ಭಕ್ತಿಯಿಂದ ತಮ್ಮ ನೆಚ್ಚಿನ ಪಾಂಡವರನ್ನು ಸ್ವಾಗತಿಸುವುದು ಈ ಭಾಗದ ವಿಶೇಷ.

—ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ



## ಗೂಡಲ್ಲೊಂದು ಗಡಿಯಾರ

ಇದು ಡಿಜಿಟಲ್ ಯುಗ. ಫೋನ್ ಡಿಜಿಟಲ್, ಗಡಿಯಾರ ಡಿಜಿಟಲ್ ಹೀಗೆ ಎಲ್ಲವೂ ಡಿಜಿಟಲ್. ಆದರೂ ನಮ್ಮ ತಾತನವರ ಮನೆಯಲ್ಲಿರುವ 85 ವರ್ಷಗಳ ಹಳೆಯದಾದ ಇನ್ನೂ ಸುಸ್ಥಿತಿಯಲ್ಲಿರುವ ‘ಕೀ’ ಕೊಡುವ ಗಡಿಯಾರ ಮರದಿಂದ ಮಾಡಿದ ಪುಟ್ಟ ಪೆಟ್ಟಿಗೆಯಲ್ಲಿ ಬೆಚ್ಚಗೆ ಕೂತಿದೆ. ‘ಟಿಕ್.. ಟಿಕ್.. ಟಿಕ್.. ಟಿಕ್..’ ಎಂದು ಈಗಲೂ ಮಧುರವಾಗಿ ನುಡಿಯುವ ಈ ಗಡಿಯಾರದ ದನಿ ಕಿವಿಗೆ ಬಿದ್ದೊಡನೆ ಹಿತವೆನಿಸುತ್ತದೆ ಜೊತೆಗೆ ಸಮಯದ ಬಗ್ಗೆ ತಿಳಿಸುತ್ತದೆ. ‘ಗಂಟೆಯ ನಂಟನೆ ಓ ಗಡಿಯಾರ.. ಬೆಳ್ಳಿಯ ಬಣ್ಣದ ಗೋಳಾಕಾರ, ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್..’ ಎಂಬ ನಮ್ಮ ತಾತನವರ ಪದ ಕಿವಿಯಲ್ಲಿ ಝೇಂಕರಿಸುತ್ತದೆ. ಎಷ್ಟೋ ವಸ್ತುಗಳು ಒಂದೆರಡು ವರ್ಷಗಳಲ್ಲೇ ಕೆಟ್ಟು ಮೂಲೆ ಸೇರುತ್ತವೆ. ಅಂತಹುದರಲ್ಲಿ 85 ವರ್ಷಗಳ ಈ ಗಡಿಯಾರವನ್ನು ನೋಡಿದಾಗ, ‘ಓಲ್ಡ್ ಈಸ್ ಗೋಲ್ಡ್’ ಎನ್ನುವುದು ಖಂಡಿತ ಸತ್ಯ ಅನಿಸುತ್ತದೆ.

—ಸುಲೋಚನ ಜೆ. ರಾವ್, ಬೆಂಗಳೂರು